**<u>ಸಾಕ್ಷಿಯನ್ನು ದಿನಾಂಕ *24.04.2026* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತುಃ</u>**

**<u>ಮುಂದುವರೆದ ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ</u>**

ನಿಪಿ–47 ಖರೀದಿ ಪತ್ರವನ್ನು ಅಮಾನತ್ತು ಪಡಿಸಿಕೊಂಡಿದ್ದೆವು ಎಂದರೆ ಸರಿ. ನಿಪಿ–48 ರಿಂದ 54 ರ ದಾಖಲೆಗಳು ಈ ಪ್ರಕರಣಕ್ಕೆ ಪೂರಕವಾದಂತಹ ದಾಖಲೆಗಳು ಇರುವುದಿಲ್ಲ ಎಂದರೆ ಆ ಬಗ್ಗೆ ತನಿಖಾಧಿಕಾರಿಯವರಿಗೆ ಕೇಳಬೇಕಾಗುತ್ತದೆ. ನಿಪಿ–55 ರ ದಾಖಲೆಯೂ ಸಹ ಈ ಪ್ರಕರಣಕ್ಕೆ ಪೂರಕವಾದಂತಹ ದಾಖಲೆ ಇರುವುದಿಲ್ಲ ಎಂದರೆ ಆ ಬಗ್ಗೆ ತನಿಖಾಧಿಕಾರಿಯವರಿಗೆ ಕೇಳಬೇಕಾಗುತ್ತದೆ. ನಿಪಿ–56 ದಾಖಲೆಯೂ ಸಹ ಆರೋಪಿತರ ಸ್ವಂತ ಆಸ್ತಿಗೆ ಸಂಬಂಧಪಟ್ಟ ದಾಖಲೆ ಇದ್ದು ಆ ದಾಖಲೆಯೂ ಸಹ ಈ ಪ್ರಕರಣಕ್ಕೆ ಪೂರಕವಾದಂತಹ ದಾಖಲೆ ಇರುವುದಿಲ್ಲ ಎಂದರೆ ಆ ಬಗ್ಗೆ ತನಿಖಾಧಿಕಾರಿಯವರಿಗೆ ಕೇಳಬೇಕಾಗುತ್ತದೆ. ನಿಪಿ–57 ಮತ್ತು 58 ರ ದಾಖಲೆಗಳು ಆರೋಪಿತರು ಸಾಲ ಮಾಡಿ ಆ ದಾಖಲೆಗಳನ್ನು ಆಧಾರಕ್ಕೆ ಸಂಬಂಧವಾಗಿ ಬರೆದುಕೊಟ್ಟಿದ್ದು ಆ ದಾಖಲೆಗಳು ಸಹ ಈ ಪ್ರಕರಣಕ್ಕೆ ಪೂರಕವಾದಂತಹ ದಾಖಲೆ ಇರುವುದಿಲ್ಲ ಎಂದರೆ ಆ ಬಗ್ಗೆ ತನಿಖಾಧಿಕಾರಿಯವರಿಗೆ ಕೇಳಬೇಕಾಗುತ್ತದೆ. ನಿಪಿ–59 ಮತ್ತು 60 ದಾಖಲೆಗಳು ಸಹ ಈ ಪ್ರಕರಣಕ್ಕೆ ಪೂರಕವಾದಂತಹ ದಾಖಲೆಗಳು ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ–61 ಮತ್ತು 62 ರ ದಾಖಲೆಗಳು ಆರೋಪಿತರ ಮಕ್ಕಳ ವಿದ್ಯಾಭ್ಯಾಸದ ಸಲುವಾಗಿ

ಕಟ್ಟಿದ್ದಂತಹ ಫೀಸಿನ ದಾಖಲೆ ಇದ್ದು ಆ ದಾಖಲೆಗಳು ಈ ಪ್ರಕರಣಕ್ಕೆ ಪೂರಕವಾದಂತಹ ದಾಖಲೆ ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-63 ರ ದಾಖಲೆಯೂ ಸಹ ಈ ಪ್ರಕರಣಕ್ಕೆ ಪೂರಕವಾದಂತಹ ದಾಖಲೆ ಇರುವುದಿಲ್ಲ ಎಂದರೆ ಸರಿಯಲ್ಲ. ಈ ಬಗ್ಗೆ ತನಿಖಾಧಿಕಾರಿಯವರನ್ನು ಕೇಳಬೇಕಾಗುತ್ತದೆ. ನಿಪಿ-64 ರಿಂದ 65 ದಾಖಲೆಗಳು ಸಹ ಈ ಪ್ರಕರಣಕ್ಕೆ ಪೂರಕವಾದಂತಹ ದಾಖಲೆ ಗಳು ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-66 ದಾಖಲೆ ಅರೋಪಿತರ ವಯಕ್ತಿಕ ದಾಖಲೆ ಇದ್ದು ಆ ದಾಖಲೆ ಈ ಪ್ರಕರಣಕ್ಕೆ ಪೂರಕವಾದಂತಹ ದಾಖಲೆ ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-67 ಮತ್ತು 68 ದಾಖಲೆಗಳು ಅರೋಪಿತರ ವಯಕ್ತಿಕ ದಾಖಲೆಗಳು ಇದ್ದು ಆ ದಾಖಲೆಗಳು ಈ ಪ್ರಕರಣಕ್ಕೆ ಪೂರಕವಾದಂತಹ ದಾಖಲೆಗಳು ಇರುವುದಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ಹಾಜರುಪಡಿಸಿರುವ ದಾಖಲೆಗಳು ಎಲ್ಲವೂ ಸೃಷ್ಟಿ ಮಾಡಿಕೊಂಡಿರುವಂತಹ ದಾಖಲೆ ಗಳು ಇರುತ್ತವೆ ಎಂದರೆ ಸರಿಯಲ್ಲ. ನಿಪಿ-21 ಮತ್ತು 22 ರ ದಾಖಲೆಗಳು ಆರೋಪಿತರಿಗೆ ಸಂಬಂಧಪಡದ ದಾಖಲೆಗಳು ಇರುತ್ತವೆ ಎಂದರೆ ಸರಿಯಲ್ಲ. ನಿಪಿ-12 ರಿಂದ 17 ರ ದಾಖಲೆಗಳು ಆರೋಪಿತರಿಗೆ ಸಂಬಂಧಪಡದ ದಾಖಲೆಗಳು ಇರುತ್ತವೆ ಎಂದರೆ ಸರಿಯಲ್ಲ. ನಿಪಿ 25, 26, 26(ಎ) ಮತ್ತು 27 ಸಹ ಆರೋಪಿತರಿಗೆ ಸಂಬಂಧಪಡದ ದಾಖಲೆಗಳು ಇರುತ್ತವೆ ಎಂದರೆ ಸರಿಯಲ್ಲ. ಮಹಜರ್ ಅನ್ನು ನಾಗೇಂದ್ರ ಎಂಬುವರು ನಮ್ಮ ಠಾಣೆಯ ಸಾಹೇಬರು ಹೇಳಿದ ಹಾಗೆ ಬರೆದಿದ್ದರು. ನಿಪಿ-45 ದಾಖಲಾತಿ ಯಾರಿಗೆ ಸಂಬಂಧ ಪಟ್ಟ ದಾಖಲೆ ಎಂದು ಸಹ ನನಗೆ ಗೊತ್ತಿರುವುದಿಲ್ಲ

ಎಂದರೆ ಆ ಬಗ್ಗೆ ತನಿಖಾಧಿಕಾರಿಯವರಿಗೆ ಕೇಳಬೆಕಾಗುತ್ತದೆ. ನಿಪಿ-17 ದಾಖಲಾತಿ ಆರೋಪಿತರಿಗೆ ಸಂಬಂಧಪಡದ ದಾಖಲೆ ಇದ್ದು ಆ ದಾಖಲೆಯಲ್ಲಿ ಯಾರು ಸಹಿ ಮಾಡಿರುವುದಿಲ್ಲ ಎಂದರೆ ಈ ಬಗ್ಗೆ ತನಿಖಾಧಿಕಾರಿಯವರನ್ನು ಕೇಳಬೇಕಾಗುತ್ತದೆ. ನಾನು ಈಗ ನೋಡುತ್ತಿರುವ ನಿಪಿ-41 ರ ದಾಖಲೆ ಮೇಲಿರುವ ದಿನಾಂಕ, ತಿಂಗಳು ಮತ್ತು ಇಸವಿಯ ಬಗ್ಗೆ ತನಿಖಾಧಿಕಾರಿಯವರನ್ನು ಕೇಳಬೇಕಾಗುತ್ತದೆ. ನಿಪಿ-41(ಎ) ಇಂದ 41(ಡಿ) ದಾಖಲಾತಿ ಗಳು ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ನಿಪಿ-41 ರಲ್ಲಿ ಯಾರದೂ ಸಹಿ ಇರುವುದಿಲ್ಲ ಈ ಬಗ್ಗೆ ತನಿಖಾಧಿಕಾರಿಯವರನ್ನು ಕೇಳಬೇಕಾಗುತ್ತದೆ. ನಿಪಿ-41(ಬಿ) ಇಂದ 41(ಡಿ) ದಾಖಲೆಗಳು ಈ ಪ್ರಕರಣಕ್ಕೆ ಪೂರಕವಾದಂತಹ ದಾಖಲೆಗಳು ಇಲ್ಲದೇ ಇದ್ದರೂ ಸಹ ಹಾಜರುಪಡಿಸಿರುತ್ತೇವೆ ಎಂದರೆ ಈ ಬಗ್ಗೆ ತನಿಖಾಧಿಕಾರಿಯವರನ್ನು ಕೇಳಬೇಕಾಗುತ್ತದೆ. ನಿಪಿ-45 ರ ದಾಖಲೆಯೂ ಸಹ ಈ ಕೇಸಿಗೆ ಸಂಬಂಧಪಡದ ದಾಖಲೆ ಇರುತ್ತದೆ ಎಂದರೆ ಸರಿಯಲ್ಲ. ರೂ. 1,83,000/- ರೂ ಹಣ ಆರೋಪಿತರ ಸ್ವಂತ ಹಣ ಇದ್ದು ಅದನ್ನು ಅಮಾನತ್ತು ಪಡಿಸಿಕೊಂಡಿದ್ದೆವು ಎಂದರೆ ಈ ಬಗ್ಗೆ ತನಿಖಾಧಿಕಾರಿಯವರನ್ನು ಕೇಳಬೇಕಾಗುತ್ತದೆ.

ಆರೋಪಿತರು ಇಬ್ಬರು ಗಂಡು ಮಕ್ಕಳ ಪೈಕಿ ಒಬ್ಬ ಮಗ MBBS ಪೂರ್ಣಗೊಳಿಸಿದ್ದ ಇನ್ನೊಬ್ಬ ಮಗ ಈಗ MBBS ಓದುತ್ತಿದ್ದಾರೆ ಎಂದರೆ ಸರಿ ಈ ವಿಷಯವನ್ನು ಆರೋಪಿತರೇ ಹೇಳಿದ್ದರು. ಆರೋಪಿತರ ಗಂಡ KSRTC ಇಲಾಖೆಯಲ್ಲಿ ಚೆಕಿಂಗ್ ಇನ್ಸ್ ಪೆಕ್ಟರ್ ಆಗಿ ಕರ್ತವ್ಯ ನಿರ್ವಹಿಸಿ ನಿವೃತ್ತ ರಾಗಿರುತ್ತಾರೆ ಎಂದರೆ ಆ ಬಗ್ಗೆ ನನಗೆ

ಗೊತ್ತಿರುವುದಿಲ್ಲ. ನನ್ನ ಪಾಟೀ ಸವಾಲಿನಲ್ಲಿ ಉಲ್ಲೇಖಿಸಿರುವ ನಿಶಾನೆಗೆ ಒಳಪಡಿಸಿರುವ ದಾಖಲೆಗಳನ್ನು ಹೊರತುಪಡಿಸಿ ಬೇರೆ ದಾಖಲೆಗಳು ಆರೋಪಿತರಿಗೆ ಸಂಬಂಧಪಡದ ದಾಖಲೆಗಳು ಇರುತ್ತವೆ ಎಂದರೆ ಈ ಬಗ್ಗೆ ತನಿಖಾಧಿಕಾರಿಯವರನ್ನು ಕೇಳಬೇಕಾಗುತ್ತದೆ.

**ಮರು ವಿಚಾರಣೆಃ– ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

***ಓ ಹೇ ಕೇ ಸ ಇ ಎ ಒ.,***

***4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,***
**ಮೈಸೂರು**